# ನಡಾವಳಿ ಮತ್ತು ನೈತಿಕತೆ ನೀತಿ
# ಆಸಕ್ತಿ ಸಂಘರ್ಷಗಳ ನೀತಿ

ETHICS & LEGAL COMPLIANCE | ISSUED: November 1, 2016 – REVISED: February 23, 2022

ಮ್ಯಾಗ್ನ ಉದ್ಯೋಗಿಗಳು ಮ್ಯಾಗ್ನದ ಹಿತದೃಷ್ಟಿಯಿಂದ ಕಾರ್ಯನಿರ್ವಹಿಸಬೇಕು. ನಿಮ್ಮ ವೈಯಕ್ತಿಕ ಆಸಕ್ತಿಗಳು ವ್ಯವಹಾರದ ಯಾವುದೇ ವಿಷಯದಲ್ಲಿ ನಿಮ್ಮ ತೀರ್ಪಿನ ಮೇಲೆ ಪ್ರಭಾವ ಬೀರಬಾರದು ಅಥವಾ ಪ್ರಭಾವ ಬೀರುವಂತೆ ಕಾಣಬಾರದು. ಈ ನೀತಿಯು ಮ್ಯಾಗ್ನ ಇಂಟರ್‌ನ್ಯಾಶನಲ್ ಇಂಕ್. ಮತ್ತು ಅದರ ಎಲ್ಲಾ ಕಾರ್ಯಾಚರಣಾ ಗುಂಪು, ವಿಭಾಗ, ಜಂಟಿ ಉದ್ಯಮಗಳು ಮತ್ತು ಜಾಗತಿಕವಾಗಿ ಇತರ ಕಾರ್ಯಾಚರಣೆಗಳಿಗೆ ಅನ್ವಯಿಸುತ್ತದೆ (ಒಟ್ಟಾರೆಯಾಗಿ, "ಮ್ಯಾಗ್ನಗೆ"). ಈ ನೀತಿ Magnaದ ಪರವಾಗಿ ಕಾರ್ಯನಿರ್ವಹಿಸುವ ಉದ್ಯೋಗಿ, ಅಧಿಕಾರಿ, ನಿರ್ದೇಶಕರು, ಸಲಹೆಗಾರರು ಮತ್ತು ಏಜೆಂಟರು ಸೇರಿದಂತೆ ಪ್ರತಿಯೊಬ್ಬರಿಗು ಅನ್ವಯ ಆಗುತ್ತದೆ.

## ವ್ಯಾಖ್ಯಾನಗಳು

ಈ ನೀತಿಯಲ್ಲಿ:

- “ಹಿತಾಸಕ್ತಿ ಸಂಘರ್ಷ” (ಅಥವಾ “ಸಂಘರ್ಷ”) ಪದವು ವಿಶಾಲ ಅರ್ಥವನ್ನು ಹೊಂದಿದೆ. ಸಾಮಾನ್ಯವಾಗಿ ಇದು ನಿಮ್ಮ ವೈಯಕ್ತಿಕ ಹಿತಾಸಕ್ತಿಗಳು ಅಥವಾ ನಿಮ್ಮ ಸಂಬಂಧಿತ ಪಾರ್ಟಿಗಳ ಹಿತಾಸಕ್ತಿಗಳು ಮ್ಯಾಗ್ನದ ಹಿತಾಸಕ್ತಿಗಳಿಂದ ಭಿನ್ನವಾಗಿರುವಾಗ ಮ್ಯಾಗ್ನಗೆ ವ್ಯವಹಾರದ ನಿರ್ಧಾರ ಮಾಡಲು ಅಥವಾ ಅದರ ಮೇಲೆ ಪ್ರಭಾವ ಬೀರಲು ನಿಮಗೆ ಸಾಧ್ಯವಾಗುವ ಪರಿಸ್ಥಿತಿಯನ್ನು ಸೂಚಿಸುತ್ತದೆ.
- ನಿರ್ವಹಣೆ” ಮತ್ತು “ನಿರ್ವಹಿಸುವುದು” ಎನ್ನುವ ಪದಗಳು ನೇಮಕ, ಮೇಲ್ವಿಚಾರಣೆ, ಮೇಲ್ವಿಚಾರಕ/ಉದ್ಯೋಗಿಗಳ ಸಂಬಂಧದಲ್ಲಿರುವುದು ಅಥವಾ ವೇತನದ ಮೌಲ್ಯಮಾಪನ ಅಥವಾ ಇನ್ನೊಬ್ಬರ ಕೆಲಸದ ಕಾರ್ಯಕ್ಷಮತೆಯ ಮೇಲೆ ವಸ್ತುನಿಷ್ಠವಾಗಿ ಪ್ರಭಾವ ಬೀರುವ ಸಾಮರ್ಥ್ಯ ಹೊಂದಿರುವುದು ಮುಂತಾದವುಗಳನ್ನು ಒಳಗೊಂಡಿವೆ.
- "ಸಂಬಂಧಿತ ಪಾರ್ಟಿ" ಎಂದರೆ ನಿಮ್ಮ ವ್ಯವಹಾರದ ತೀರ್ಪಿನ ಮೇಲೆ ಪ್ರಭಾವ ಬೀರಬಹುದಾದ ಅಥವಾ ಪ್ರಭಾವ ಬೀರುವುದಾಗಿ ಕಾಣುವ ನಿಮಗೆ ಸಂಬಂಧಿಸಿದ ಅಥವಾ ನೀವು ವೈಯಕ್ತಿಕ ಸಂಬಂಧವನ್ನು ಹೊಂದಿರುವ ಯಾವುದೇ ವ್ಯಕ್ತಿ. ಉದಾಹರಣೆಗೆ ಕುಟುಂಬದ ಸದಸ್ಯರು, ಸ್ನೇಹಿತರು ಅಥವಾ ಮಾಜಿ ಸಹೋದ್ಯೋಗಿಗಳು, ಸಹಪಾಠಿಗಳು ಮತ್ತು ಉದ್ಯೋಗದಾತರು.
- ಈ ಕೆಳಗಿನ ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿಯು ವ್ಯವಹಾರದಲ್ಲಿ “ಮಹತ್ವದ ಆಸಕ್ತಿ” ಹೊಂದಿರುತ್ತಾರೆ (i) ನೇರವಾಗಿ ಅಥವಾ ಪರೋಕ್ಷವಾಗಿ ಹತ್ತು ಪ್ರತಿಶತ (10%) ಅಥವಾ ಹೆಚ್ಚಿನ ಸ್ಟಾಕ್ ಅಥವಾ ಆಸ್ತಿಗಳನ್ನು ಅಥವಾ ವ್ಯವಹಾರದ ಇತರ ಆಸಕ್ತಿಗಳನ್ನು ನಿಯಂತ್ರಿಸುತ್ತಿದ್ದರೆ (ii) ವ್ಯವಹಾರದಲ್ಲಿ ನಾಯಕತ್ವದ ಪಾತ್ರವನ್ನು ಹೊಂದಿದ್ದರೆ; ಅಥವಾ (iii) ವ್ಯಾಪಾರ ಮತ್ತು ಮ್ಯಾಗ್ನ ನಡುವಿನ ಸಂಬಂಧದಿಂದ ಪ್ರಯೋಜನ ಪಡೆಯುತ್ತಿದ್ದರೆ.

## ನಿಮ್ಮ ಸಂಘರ್ಷದ ಬಗ್ಗೆ ಹೇಳುವುದು

ನಿಮಗೆ ಹಿತಾಸಕ್ತಿಯ ಸಂಘರ್ಷವಿದ್ದರೆ ಅಥವಾ ಆಸಕ್ತಿ ಸಂಘರ್ಷ ಉಂಟಾಗುವ ಸಾಧ್ಯತೆಯಿದೆ ಎಂದು ನಂಬಿದರೆ (ಅಥವಾ ಬೇರೆಯವರು ಅದರ ಸಾಧ್ಯತೆಯನ್ನು ಸರಿಯಾಗಿ ಗ್ರಹಿಸಿದ್ದರೆ), ಆದಷ್ಟು ಬೇಗ ಸಂಘರ್ಷದ ಬಗ್ಗೆ ಹೇಳಬೇಕು ಹಾಗೂ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುವ ಮೊದಲು ಅನುಮೋದನೆ ಪಡೆಯಬೇಕು. MagNET ನಲ್ಲಿ ಲಭ್ಯವಿರುವ**ಅನುಸರಣೆ ನಿಯಂತ್ರಣ ಕಾರ್ಯವಿಧಾನ - ಹಿತಾಸಕ್ತಿ ಸಂಘರ್ಷಗಳು** (“**ವಿಧಾನ**”) ನಲ್ಲಿ ಸಂಘರ್ಷಗಳನ್ನು ಬಹಿರಂಗಪಡಿಸುವ ಮತ್ತು ಅನುಮೋದನೆ ಪಡೆಯುವ ಪ್ರಕ್ರಿಯೆಯನ್ನು ವಿವರಿಸಲಾಗಿದೆ.
ಸಂದರ್ಭಗಳ ಆಧಾರದ ಮೇಲೆ, ಮ್ಯಾಗ್ನ ಘರ್ಷಣೆಗೆ ಕಾರಣವಾಗುವ ಸಂದರ್ಭಗಳನ್ನು ಷರತ್ತುಗಳೊಂದಿಗೆ ಅಥವಾ ಇಲ್ಲದೆ ಅನುಮೋದನೆ ನೀಡುವುದು ಮ್ಯಾಗ್ನದ ಉತ್ತಮ ಹಿತಾಸಕ್ತಿಯಲ್ಲಿದೆ ಎಂದು ನಿರ್ಧರಿಸಿದರೆ ಆ ಸಂದರ್ಭಗಳನ್ನು

ಅನುಮೋದಿಸಲು ಆಯ್ಕೆ ಮಾಡಬಹುದು. ಮ್ಯಾಗ್ನದ ಉತ್ತಮ ಆಸಕ್ತಿಗಳನ್ನು ಉತ್ತೇಜಿಸಲು ಸಹೋದ್ಯೋಗಿಗಳ ಮೇಲ್ವಿಚಾರಣೆ ಮತ್ತು ನಿರಂತರ ನಿಗಾವಹಿಸುವಿಕೆಯಲ್ಲಿ(ಅದೇ ಸಂಘರ್ಷವನ್ನು ಎದುರಿಸದ) ಷರತ್ತುಬದ್ಧ ಅನುಮೋದನೆಗೆ ಕೆಲವು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ,

## ಕಾರ್ಯಸ್ಥಳದಲ್ಲಿ ವೈಯಕ್ತಿಕ ಸಂಬಂಧಗಳು

ಸಂಘರ್ಷಗಳ ಸಾಮಾನ್ಯ ವಿಧಗಳು

ಸಾಮಾನ್ಯವಾಗಿ ಆಸಕ್ತಿಯ ಘರ್ಷಣೆಗಳು ಈ ಕೆಳಗಿನ ಸಂದರ್ಭಗಳಲ್ಲಿ ಸಂಭವಿಸುತ್ತವೆ.

ಕಾರ್ಯಸ್ಥಳದಲ್ಲಿ ವೈಯಕ್ತಿಕ ಸಂಬಂಧಗಳು

ಸಂಬಂಧಿಗಳನ್ನು ನಿರ್ವಹಿಸುತ್ತಿದ್ದರೆ ಅಥವಾ ನೀವು ಅವರಿಂದ ನಿರ್ವಹಿಸಲ್ಪಡುತ್ತಿದ್ದರೆ ಸಂಘರ್ಷವಿರುತ್ತದೆ(ಉದಾಹರಣೆಗೆ, ತಮ್ಮ ಗಂಡ/ಹೆಂಡತಿಯನ್ನು ನಿರ್ವಹಿಸುವ ವ್ಯಕ್ತಿ) ಸಂಬಂಧಿಗಳೊಂದಿಗೆ ನೇರವಾಗಿ ನಿರ್ವಹಣೆ ಮಾಡುವ ಅಥವಾ ವರದಿ ಮಾಡುವ ಸ್ಥಾನದಲ್ಲಿರುವುದನ್ನು ನಿಷೇಧಿಸಲಾಗಿದೆ. ಸಂಬಂಧವನ್ನು ಬಹಿರಂಗಪಡಿಸಿದ್ದರೆ ಮತ್ತು ಕಾರ್ಯವಿಧಾನದ ಅಡಿಯಲ್ಲಿ ಅನುಮೋದನೆ ಪಡೆದಿದ್ದರೆ ಆಗ ಸಂಬಂಧಿತ ಪಾರ್ಟಿಯನ್ನು ಪರೋಕ್ಷವಾಗಿ ನಿರ್ವಹಿಸಬಹುದು.

ಸ್ವ ವ್ಯವಹಾರ

ಮ್ಯಾಗ್ನ ಮತ್ತು ನೀವು ಗಮನಾರ್ಹ ಆಸಕ್ತಿ ಹೊಂದಿರುವ ವ್ಯವಹಾರದ ನಡುವಿನ ವ್ಯಾಪಾರ ಸಂಬಂಧವನ್ನು ನೀವು ಅನುಮೋದಿಸಿದರೆ ಅಥವಾ ನಿರ್ದೇಶಿಸಿದರೆ ನೀವು ಸಂಘರ್ಷವನ್ನು ಹೊಂದಿರುತ್ತೀರಿ. ಉದಾಹರಣೆಗೆ, ಸಹಾಯಕ ಜನರಲ್ ಮ್ಯಾನೇಜರ್ ಸಹ-ಮಾಲೀಕತ್ವದ ಮಾರಾಟಗಾರರಿಗೆ ವ್ಯವಹಾರ ನೀಡಿದರೆ ಅವರು ಸಂಘರ್ಷವನ್ನು ಹೊಂದಿರುತ್ತಾರೆ.

ನೀವು ವೈಯಕ್ತಿಕ ಲಾಭದ ನಿರೀಕ್ಷೆಯಲ್ಲಿ ಅಥವಾ ಅದಕ್ಕೆ ಬದಲಾಗಿ ಮೂರನೇ ವ್ಯಕ್ತಿಯೊಂದಿಗೆ ವ್ಯಾಪಾರ ಸಂಬಂಧವನ್ನು ಅನುಮೋದಿಸಿದರೆ ಅಥವಾ ನಿರ್ದೇಶಿಸಿದರೆ ನೀವು ಆಸಕ್ತಿಯ ಸಂಘರ್ಷ ಹೊಂದಿರುತ್ತೀರಿ (ಉದಾ. ಕಿಕ್‌ಬ್ಯಾಕ್). ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ನಮ್ಮ **ಲಂಚ ಮತ್ತು ಅನುಚಿತ ಪಾವತಿಗಳ ನೀತಿ** ಯನ್ನು ನೋಡಿ.

ಸಂಬಂಧಿತ ಪಾರ್ಟಿಯ ವಹಿವಾಟುಗಳು

ಮ್ಯಾಗ್ನ ಮತ್ತು ನಿಮ್ಮ ಸಂಬಂಧಿತ ಪಾರ್ಟಿಯು ಗಮನಾರ್ಹ ಆಸಕ್ತಿ ಹೊಂದಿರುವ ವ್ಯವಹಾರದ ನಡುವಿನ ವ್ಯಾಪಾರ ಸಂಬಂಧವನ್ನು ಅನುಮೋದಿಸುವ ಅಥವಾ ನಿರ್ದೇಶಿಸುವ ಸ್ಥಿತಿಯಲ್ಲಿದ್ದರೆ ನೀವು ಸಂಘರ್ಷವನ್ನು ಹೊಂದಿರುತ್ತೀರಿ. ಉದಾಹರಣೆಗೆ, ಒಬ್ಬ ಜನರಲ್ ಮ್ಯಾನೇಜರ್ ತಮ್ಮ ವಿಭಾಗ ಮತ್ತು ತಮ್ಮ ಮಗನ ಒಡೆತನದ ಕಂಪನಿಯ ನಡುವಿನ ವ್ಯಾಪಾರ ಸಂಬಂಧವನ್ನು ಅನುಮೋದಿಸಿದರೆ ಅವರು ಸಂಘರ್ಷವನ್ನು ಹೊಂದಿರುತ್ತಾರೆ.

ಸಂಬಂಧಿತ ಪಾರ್ಟಿಗೆ ವೈಯಕ್ತಿಕ ಲಾಭ ಮಾಡಿಕೊಡುವ ನಿರೀಕ್ಷೆಯಲ್ಲಿ ಅಥವಾ ಅದಕ್ಕೆ ಬದಲಾಗಿ ಮೂರನೇ ವ್ಯಕ್ತಿಯೊಂದಿಗೆ ವ್ಯಾಪಾರ ಸಂಬಂಧವನ್ನು ಅನುಮೋದಿಸಿದರೆ ಅಥವಾ ನಿರ್ದೇಶಿಸಿದರೂ ಸಹ ಸಂಘರ್ಷವಿರುತ್ತದೆ. ಉದಾಹರಣೆಗೆ, ಒಬ್ಬ ಪರ್ಚೇಸಿಂಗ್ ಮ್ಯಾನೇಜರ್ ಒಬ್ಬರು ಮಾರಾಟಗಾರರು ತಮ್ಮ ಸಹೋದರಿಯನ್ನು ನೇಮಿಸಿಕೊಳ್ಳುವ ಷರತ್ತಿನ ಮೇಲೆ ಮಾರಾಟಗಾರರಿಗೆ ವ್ಯವಹಾರ ನೀಡಿದರೆ ಅದು ಘರ್ಷಣೆ.

ಹೊರಗಿನ ಸ್ಥಾನಗಳು

ನಮ್ಮ VP, ನೈತಿಕತೆ ಮತ್ತು ಮುಖ್ಯ ಅನುಸರಣೆ ಅಧಿಕಾರಿಗಳು ಅಧಿಕೃತಗೊಳಿಸಲ್ಪಟ್ಟ ಅತ್ಯಂತ ಸೀಮಿತ ಸಂದರ್ಭಗಳನ್ನು ಹೊರತುಪಡಿಸಿ, ನೀವು ಮ್ಯಾಗ್ನ ಗ್ರಾಹಕರು, ಸ್ಪರ್ಧಿಗಳು ಅಥವಾ ಪೂರೈಕೆದಾರರೊಂದಿಗೆ ಯಾವುದೇ ಕೆಲಸದಲ್ಲಿ (ಪಾವತಿಸಿದ ಅಥವಾ ಪಾವತಿಸದ)ತೊಡಗುವಂತಿಲ್ಲ

ನಿಮ್ಮ ಸ್ವಂತ ವ್ಯವಹಾರವನ್ನೂ ಒಳಗೊಂಡಂತೆ ಮ್ಯಾಗ್ನದಲ್ಲಿ ನಿಮ್ಮ ಕೆಲಸಕ್ಕೆ ಕೆಲಸದ ಸಮಯದಲ್ಲಿ ಪೂರ್ಣ ಸಮಯ ಮತ್ತು ಗಮನಕ್ಕಿಂತ ಕಡಿಮೆ ವಿನಿಯೋಗಿಸಲು ಕಾರಣವಾಗುವಂತಹ ಯಾವುದೇ ಕೆಲಸದಲ್ಲಿ ನೀವು ಹೊರಗಡೆಯಿಂದ ತೊಡಗಲು ಬಯಸಿದರೆ, ಅಥವಾ ಯಾವುದೇ ಉದ್ಯಮದಲ್ಲಿ ತೊಡಗಿದ್ದರೆ, ಕಾರ್ಯವಿಧಾನದ ಅಡಿಯಲ್ಲಿ ಅದನ್ನು ಬಹಿರಂಗಪಡಿಸಬೇಕು ಮತ್ತು ಅದಕ್ಕಾಗಿ ಲಿಖಿತ ಅನುಮೋದನೆ ಪಡೆಯಬೇಕು. ಉದಾಹರಣೆಗೆ, ಒಬ್ಬ ಎಂಜಿನಿಯರ್ ಮ್ಯಾಗ್ನ ವ್ಯವಹಾರದ ಸಮಯದಲ್ಲಿ ತಮ್ಮ ಸ್ವಂತ ಸಲಹಾ ವ್ಯವಹಾರವನ್ನು ಅಭಿವೃದ್ಧಿಪಡಿಸಲು ಗಣನೀಯ ಸಮಯವನ್ನು ವಿನಿಯೋಗಿಸಿದರೆ ಸಂಘರ್ಷವನ್ನು ಹೊಂದಿರುತ್ತಾರೆ.

ಕಾರ್ಪೊರೇಟ್ ಅವಕಾಶಗಳು ಮತ್ತು ಸಂಪನ್ಮೂಲಗಳ ಬಳಕೆ

ಮ್ಯಾಗ್ನದ ಆಸ್ತಿ ಅಥವಾ ಮಾಹಿತಿಯ ಬಳಕೆಯ ಮೂಲಕ ಅಥವಾ ಮ್ಯಾಗ್ನದಲ್ಲಿ ನಿಮ್ಮ ಕೆಲಸದ ಮೂಲಕ ಕಂಡುಹಿಡಿಯಲಾದ ಅವಕಾಶಗಳನ್ನು ನಿಮಗಾಗಿ ಅಥವಾ ಸಂಬಂಧಿತ ಪಾರ್ಟಿಗಾಗಿ ಬಳಸಿದರೆ ನೀವು ಸಂಘರ್ಷವನ್ನು ಹೊಂದಿರುತ್ತೀರಿ. ಮ್ಯಾಗ್ನದ ಆಸ್ತಿ, ಮಾಹಿತಿ ಅಥವಾ ನಿಮ್ಮ ಕೆಲಸದ ಸ್ಥಾನವನ್ನು ವೈಯಕ್ತಿಕ ಲಾಭಕ್ಕಾಗಿ ಅಥವಾ ಸಂಬಂಧಿತ ಪಾರ್ಟಿಯ ಲಾಭಕ್ಕಾಗಿ ಬಳಸುವುದೂ ಸಹ ಆಸಕ್ತಿಯ ಸಂಘರ್ಷವಾಗಿದೆ (ನಮ್ಮ **ಉಡುಗೊರೆಗಳು ಮತ್ತು ಮನರಂಜನೆಯ ಮೇಲಿನ ನೀತಿ** ಯಲ್ಲಿ ಹೇಳಲಾದ ಉದ್ಯೋಗಿಗಳ 'ಪರ್ಕ್‌ಗಳು' ಮತ್ತು ಪ್ರಯೋಜನಗಳು, ಅಥವಾ ಉಡುಗೊರೆಗಳು ಮತ್ತು ಮನರಂಜನೆ ಇದಕ್ಕೆ ಒಳಪಡುವುದಿಲ್ಲ). ಅಂತಹ ಸಂದರ್ಭಗಳಲ್ಲಿ, ನೀವು ಸಂಘರ್ಷವನ್ನು

ಬಹಿರಂಗಪಡಿಸಬೇಕು ಮತ್ತು ಹಿತಾಸಕ್ತಿ ಸಂಘರ್ಷದ ಕಾರ್ಯವಿಧಾನದ ಅನುಸಾರವಾಗಿ ಲಿಖಿತ ಅನುಮೋದನೆ ಪಡೆಯಬೇಕು.
ಉದಾಹರಣೆಗೆ, ಉದ್ಯೋಗಿಯೊಬ್ಬರು ಕುಟುಂಬದ ಸದಸ್ಯರ ಕೂಟವನ್ನು ಆಯೋಜಿಸಲು ತಮ್ಮ ವಿಭಾಗದ ಕೆಫೆಟೇರಿಯಾ ಬಳಸಿದರೆ ಸಂಘರ್ಷವನ್ನು ಹೊಂದಿರುತ್ತಾರೆ. ಅಲ್ಲದೆ, ಉದ್ಯೋಗಿಯು ತಮ್ಮ ಗಂಡನ ವ್ಯವಹಾರದ ಪ್ರಯೋಜನಕ್ಕಾಗಿ ಮ್ಯಾಗ್ನ ವ್ಯವಹಾರ ಅವಕಾಶದ ಬಗ್ಗೆ ಮಾಹಿತಿಯನ್ನು ಹಂಚಿಕೊಂಡರೆ ಸಂಘರ್ಷವನ್ನು ಹೊಂದಿರುತ್ತಾರೆ.

## ಉಲ್ಲಂಘನೆಗಳು

ಅನುಸರಣೆಯಾಗಬೇಕಾದ ನಿಯಮಗಳ ಉಲ್ಲಂಘನೆಗಳನ್ನು ಮ್ಯಾಗ್ನ ಸಹಿಸುವುದಿಲ್ಲ. ಯಾವುದೇ ಉಲ್ಲಂಘನೆಯನ್ನು ಗಂಭೀರ ವಿಷಯವೆಂದು ಪರಿಗಣಿಸಲಾಗುವುದು ಮತ್ತು ಉದ್ಯೋಗದಿಂದ ವಜಾ ಮಾಡುವುದನ್ನು ಸೇರಿದಂತೆ ಶಿಸ್ತು ಕ್ರಮವನ್ನು ಜರುಗಿಸಬಹುದಾಗಿದೆ.
ಯಾರಾದರೂ ಮ್ಯಾಗ್ನ ನಡಾವಳಿ ಮತ್ತು ನೈತಿಕತೆಯ ನೀತಿಯನ್ನು ಉಲ್ಲಂಘಿಸುತ್ತಿದ್ದಾರೆ ಎಂದು ನಿಮಗೆ ತಿಳಿದಿದ್ದರೆ ಅಥವಾ ಅನುಮಾನವಿದ್ದರೆ (ಉದಾಹರಣೆಗೆ, ಯಾರೋ ಸಂಘರ್ಷವನ್ನು ಬಹಿರಂಗಪಡಿಸಿಲ್ಲ ಎಂದು ನಿಮಗೆ ತಿಳಿದಿದ್ದರೆ) ನೀವದನ್ನು (i) ನಿಮ್ಮ ಮ್ಯಾನೇಜರ್; (ii) ಗುಂಪು, ಪ್ರಾದೇಶಿಕ ಅಥವಾ ಕಾರ್ಪೊರೇಟ್ ವಕೀಲರು; (iii) ಪ್ರಾದೇಶಿಕ ಅನುಸರಣೆ ಅಧಿಕಾರಿ; (iv) ಮ್ಯಾಗ್ನದ VP, ನೀತಿಶಾಸ್ತ್ರ ಮತ್ತು ಮುಖ್ಯ ಅನುಸರಣೆ ಅಧಿಕಾರಿ ಅಥವಾ (v) ಮ್ಯಾಗ್ನ ಹಾಟ್‌ಲೈನ್‌ಗೆ ವರದಿ ಮಾಡಬೇಕು.
ಮ್ಯಾಗ್ನದ ನಡಾವಳಿ ಮತ್ತು ನೈತಿಕತೆಯ ನೀತಿ ಅಥವಾ ಈ ನೀತಿಯ ಯಾವುದೇ ಉಲ್ಲಂಘನೆಯನ್ನು ಉತ್ತಮ ನಂಬಿಕೆಯಿಂದ ವರದಿ ಮಾಡಿದ್ದಕ್ಕಾಗಿ ಪ್ರತೀಕಾರದಿಂದ ಉದ್ಯೋಗಿಗಳನ್ನು ಮ್ಯಾಗ್ನ ರಕ್ಷಿಸುತ್ತದೆ. ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ನಮ್ಮ ಪ್ರತಿಕಾರ-ವಿರೋಧಿ ನೀತಿ ಯನ್ನು ನೋಡಿ.

## ಉಪಯುಕ್ತ ಸಲಹೆಗಳು

*ಯಾವಾಗಲೂ...*

- ü ನೀವು ಮ್ಯಾಗ್ನ ಪರವಾಗಿ ಮಾಡುವ ಅಥವಾ ಶಿಫಾರಸು ಮಾಡುವ ವ್ಯಾಪಾರ ನಿರ್ಧಾರಗಳ ಮೇಲೆ ಪರಿಣಾಮ ಬೀರುವ ವೈಯಕ್ತಿಕ ಆಸಕ್ತಿಯನ್ನು ಹೊಂದಿದ್ದೀರಾ ಎಂಬುದರ ಕುರಿತು ಯೋಚಿಸಿ.
- ü ಸಂದೇಹವಿದ್ದಲ್ಲಿ, ನಿಮ್ಮ ಮ್ಯಾನೇಜರ್, ಗುಂಪು, ಪ್ರಾದೇಶಿಕ ಅಥವಾ ಕಾರ್ಪೊರೇಟ್ ವಕೀಲರು ಅಥವಾ ಪ್ರಾದೇಶಿಕ ಅನುಸರಣೆ ಅಧಿಕಾರಿಯೊಂದಿಗೆ ಮಾತನಾಡಿ.
- ü ಮ್ಯಾಗ್ನ ಪರವಾಗಿ ನೀವು ತೆಗೆದುಕೊಳ್ಳುವ ಯಾವುದೇ ಕ್ರಮಗಳನ್ನು ಪತ್ರಿಕೆಯ ಮೊದಲ ಪುಟದಲ್ಲಿ ಅಥವಾ ಸಾಮಾಜಿಕ ಮಾಧ್ಯಮದಲ್ಲಿ ವರದಿ ಮಾಡಿದರೆ ಅದನ್ನು ಹೇಗೆ ಗ್ರಹಿಸಬಹುದು ಎಂಬುದನ್ನು ಪರಿಗಣಿಸಿ. ನಿಮ್ಮ ಕ್ರಮಗಳಿಂದ ನೀವು ವೈಯಕ್ತಿಕವಾಗಿ ಪ್ರಯೋಜನ ಪಡೆದಿದ್ದೀರಿ ಎಂದು ಸಾರ್ವಜನಿಕರು ಗ್ರಹಿಸಿದರೆ, ನೀವು ಬಹುಶಃ ಸಂಘರ್ಷವನ್ನು ಹೊಂದಿರುತ್ತೀರಿ.
- ü ನಿಮ್ಮ ಸಂಘರ್ಷವನ್ನು ಸಾಧ್ಯವಾದಷ್ಟು ಬೇಗ ಬಹಿರಂಗಪಡಿಸಿ ಮತ್ತು ಯಾವುದೇ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುವ ಮೊದಲು ಅನುಮೋದನೆ ಪಡೆದುಕೊಳ್ಳಿ.
- ü ನಮ್ಮ ನಡಾವಳಿ ಮತ್ತು ನೈತಿಕತೆ ನೀತಿ ಅಥವಾ ಈ ನೀತಿಯ ಯಾವುದೇ ಶಂಕಿತ ಉಲ್ಲಂಘನೆಗಳನ್ನು ವರದಿ ಮಾಡಿ.

*ಎಂದೂ...*

- ನಮ್ಮ VP, ನೈತಿಕತೆ ಮತ್ತು ಮುಖ್ಯ ಅನುಸರಣೆ ಅಧಿಕಾರಿಗಳ ಪೂರ್ವ ಲಿಖಿತ ಅನುಮೋದನೆಯಿಲ್ಲದೆಯೇ ಮ್ಯಾಗ್ನ ಪೂರೈಕೆದಾರು , ಗ್ರಾಹಕರು ಅಥವಾ ಪ್ರತಿಸ್ಪರ್ಧಿಗಳೊಂದಿಗೆ ಎರಡನೇ ಕೆಲಸ ಹಿಡಿಯುವುದು. ಇಂತಹದಕ್ಕಾಗಿ ಅಸಾಧಾರಣ ಸಂದರ್ಭಗಳಲ್ಲಿ ಮಾತ್ರ ಅನುಮೋದನೆ ನೀಡಲಾಗುತ್ತದೆ.
- û ಈ ಘರ್ಷಣೆಯನ್ನು ಬಹಿರಂಗಪಡಿಸದೆ ಮತ್ತು ಅನುಮೋದನೆ ಪಡೆಯದೆಯೇ ಮ್ಯಾಗ್ನ ಮತ್ತು ನೀವು ಅಥವಾ ನಿಮ್ಮ ಸಂಬಂಧಿತ ಪಾರ್ಟಿಯು ಗಮನಾರ್ಹ ಆಸಕ್ತಿ ಹೊಂದಿರುವ ವ್ಯವಹಾರದ ನಡುವಿನ ವ್ಯಾಪಾರ ಸಂಬಂಧವನ್ನು ನಮೂದಿಸುವುದು ಅಥವಾ ಬೆಂಬಲಿಸುವುದು.
- û ಈ ಸಂಘರ್ಷವನ್ನು ಬಹಿರಂಗಪಡಿಸದೆ ಮತ್ತು ಅನುಮೋದನೆ ಪಡೆಯದೆಯೇ ನಿಮ್ಮ ಸಂಬಂಧಿತ ಪಾರ್ಟಿಯ ನೇಮಕವನ್ನು ನೇಮಿಸುವುದು ಅಥವಾ ಬೆಂಬಲಿಸುವುದು.
- û ಮ್ಯಾಗ್ನ ಕೆಲಸದ ಸಮಯದಲ್ಲಿ ನಿಮ್ಮ ಸಮಯ ಮತ್ತು ಗಮನದ ಗಮನಾರ್ಹ ಭಾಗದ ಅಗತ್ಯವಿರುವ ಹೊರಗಿನ

ಕೆಲಸ ಸ್ವೀಕರಿಸುವುದು, ಈ ಸಂಘರ್ಷವನ್ನು ಬಹಿರಂಗಪಡಿಸದೆ ಮತ್ತು ಅನುಮೋದನೆ ಪಡೆಯದೆ ಇರುವುದು.

- û ಈ ಘರ್ಷಣೆಯನ್ನು ಬಹಿರಂಗಪಡಿಸದೆ ಮತ್ತು ಅನುಮೋದನೆ ಪಡೆಯದೆಯೇ, ನಿಮಗಾಗಿ ಅಥವಾ ನಿಮ್ಮ ಸಂಬಂಧಿತ ಪಾರ್ಟಿಗಾಗಿ, ಮ್ಯಾಗ್ನದ ಆಸ್ತಿ ಅಥವಾ ಮಾಹಿತಿಯ ಬಳಕೆಯ ಮೂಲಕ ಅಥವಾ ಮ್ಯಾಗ್ನದಲ್ಲಿ ನಿಮ್ಮ ಸ್ಥಾನದ ಮೂಲಕ ನೀವು ಕಂಡುಕೊಳ್ಳುವ ಅವಕಾಶಗಳನ್ನು ಬಳಸಿಕೊಳ್ಳುವುದು.

## ಹೆಚ್ಚಿನ ಮಾಹಿತಿ:

ಹೆಚ್ಚಿನ ಮಾಹಿತಿ ಅಥವಾ ಸಲಹೆಗಾಗಿ, ನಿಮ್ಮ ಗುಂಪು ಅಥವಾ ಪ್ರಾದೇಶಿಕ ಕಾನೂನು ಸಲಹೆಗಾರರು, ಪ್ರಾದೇಶಿಕ ಅನುಸರಣೆ ಅಧಿಕಾರಿಗಳು ಅಥವಾ ಮ್ಯಾಗ್ನ VP, ನೈತಿಕತೆ ಮತ್ತು ಮುಖ್ಯ ಅನುಸರಣೆ ಅಧಿಕಾರಿಗಳನ್ನು ಸಂಪರ್ಕಿಸಿ.

---

| | |
|---|---|
| Issued: | November 1, 2016 |
| Revised: | February 23, 2022 |
| Next Review: | Q1 2025 |
| Issued By: | Ethics & Legal Compliance |
| Approved By: | Chief Compliance Officer, on behalf of Magna Compliance Council |